ಕರ್ನಾಟಕ ಸರ್ಕಾರ
(ಕೃಷಿ ಇಲಾಖೆ)

ಸಂ: ಜಕೃನಿ/(CSS)NFSM/Pulse/ಪರಿಷ್ಕೃತ/ಜಿ/2021-22

ಕೃಷಿ ಆಯುಕ್ತರ ಕಾರ್ಯಾಲಯ
ಶೇಷಾದ್ರಿ ರಸ್ತೆ, ಬೆಂಗಳೂರು
ದಿನಾಂಕ: 07.12.2021

ಇವರಿಗೆ,

ಜಂಟಿ ಕೃಷಿ ನಿರ್ದೇಶಕರು
ಬಾಗಲಕೋಟೆ/ಬೆಳಗಾವಿ/ಬಳ್ಳಾರಿ/ಬೀದರ್/ಚಾಮರಾಜನಗರ/
ಚಿಕ್ಕಮಗಳೂರು ಚಿತ್ರದುರ್ಗ/ದಾವಣಗೆರೆ/ಧಾರವಾಡ/ಗದಗ/
ಕಲಬುರಗಿ/ಹಾಸನ/ಕೊಪ್ಪಳ ಹಾವೇರಿ/ಮೈಸೂರು/ರಾಯಚೂರು/
ವಿಜಯಪುರ/ಯಾದಗಿರಿ.

ವಿಷಯ: 2021-22ನೇ ಸಾಲಿನ ಎನ್.ಎಫ್.ಎಸ್.ಎಮ್ ಯೋಜನೆಯಡಿ ದ್ವಿದಳಧಾನ್ಯಗಳ ಅನುಮೋದಿತ ಹೆಚ್ಚುವರಿ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸುವ ಬಗ್ಗೆ

ಉಲ್ಲೇಖ: ಕೇಂದ್ರ ಸರ್ಕಾರದ ಪತ್ರ ಸಂ: :-File No2-13/2021-NFSM, Dt. 29.11.2021

*****

ರಾಷ್ಟ್ರೀಯ ಆಹಾರ ಭದ್ರತಾ ಅಭಿಯಾನದ ದ್ವಿದಳಧಾನ್ಯ ಯೋಜನೆಯಡಿ 2021-22ನೇ ಸಾಲಿನಲ್ಲಿ ರಾಜ್ಯದಲ್ಲಿ ದ್ವಿದಳಧಾನ್ಯಗಳ ಉತ್ಪಾದಕತೆ ಮತ್ತು ಉತ್ಪಾದನೆಯನ್ನು ಹೆಚ್ಚಿಸುವ ನಿಟ್ಟಿನಲ್ಲಿ ಹಿಂಗಾರು ಹಂಗಾಮಿನಲ್ಲಿ ಅನುಷ್ಠಾನಗೊಳಿಸಲು ಹೆಚ್ಚುವರಿಯಾಗಿ ಒಟ್ಟು ರೂ. 1907.621 ಲಕ್ಷಗಳ ವೆಚ್ಚದ ಕಾರ್ಯಕ್ರಮಕ್ಕೆ (ಲೆಕ್ಕ ಶೀರ್ಷಿಕೆ 2401-00-102-0-08) ಕೇಂದ್ರ ಸರ್ಕಾರದ ಉಲ್ಲೇಖಿತ ಪತ್ರದಲ್ಲಿ ಕ್ರಿಯಾ ಯೋಜನೆಗೆ ಅನುಮೋದನೆ ದೊರೆತಿರುತ್ತದೆ. ರಾಜ್ಯದ ಆಯ್ದ 18 ಜಿಲ್ಲೆಗಳಿಗೆ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ಜಿಲ್ಲಾವಾರು, ವರ್ಗವಾರು ಮತ್ತು ಘಟಕವಾರು ಗುರಿಗಳನ್ನು ಅನುಬಂಧ 1 & 1A ರಲ್ಲಿ ಲಗತ್ತಿಸಿ ನೀಡಲಾಗಿದೆ.

ಕಾರ್ಯಕ್ರಮದ ಘಟಕಗಳಡಿ ವರ್ಗವಾರು (ಸಾಮಾನ್ಯ, ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪ ಯೋಜನೆ) ಅನುಷ್ಠಾನಗೊಳಿಸುವ ಸಂದರ್ಭದಲ್ಲಿ ಅಲ್ಪಸಂಖ್ಯಾತರು, ಮಹಿಳೆಯರಿಗೆ ಆದ್ಯತೆ ನೀಡಿ ಶೇ.33% ರಷ್ಟು ಅನುದಾನವನ್ನು ಮಹಿಳಾ ಫಲಾನುಭವಿಗಳಿಗೆ ಮೀಸಲಿರಿಸುವುದು. ಕೃಷಿ ಯಾಂತ್ರೀಕರಣ ಉಪ ಅಭಿಯಾನ (SMAM) ಯೋಜನೆಯ ಕಾರ್ಯಕ್ರಮದ ಮಾರ್ಗಸೂಚಿಯನ್ವಯ ಕೃಷಿ ಯಂತ್ರೋಪಕರಣಗಳು/ಸಿಂಪರಣಾ ಸಾಧನಗಳನ್ನು ಅನುಷ್ಠಾನಗೊಳಿಸುವುದು.

ಮುಂದುವರೆದು, ಸದರಿ ಕಾರ್ಯಕ್ರಮವನ್ನು 2021-22ನೇ ಸಾಲಿನ ರಾಷ್ಟ್ರೀಯ ಆಹಾರ ಭದ್ರತಾ ಅಭಿಯಾನದ ಮಾರ್ಗಸೂಚಿಗಳು ಮತ್ತು ಎನ್.ಎಫ್.ಎಸ್.ಎಮ್ ದ್ವಿದಳಧಾನ್ಯ ಘಟಕಗಳ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಪ್ರಸಕ್ತ ಸಾಲಿನಲ್ಲಿ ಈವರೆಗೆ ನೀಡಲಾಗಿರುವ ಮಾರ್ಗಸೂಚಿಗಳನ್ನು ಅನುಸರಿಸಿ, ತಮ್ಮ ಜಿಲ್ಲೆಗೆ ನಿಗದಿಪಡಿಸಿದ ಕಾರ್ಯಕ್ರಮದಂತೆ ಯಶಸ್ವಿಯಾಗಿ ಅನುಷ್ಠಾನಗೊಳಿಸಲು ಹಾಗೂ ಬಗ್ಗೆ ಕಾರ್ಯಕ್ರಮದ ಪ್ರತ್ಯೇಕವಾಗಿ ಮಾಸಿಕ ಪ್ರಗತಿ ವರದಿಯನ್ನು ಕೇಂದ್ರ ಕಛೇರಿಗೆ ಮಾಹೆಯಾನ ತಪ್ಪದೆ ಸಲ್ಲಿಸಲು ಸೂಚಿಸಲಾಗಿದೆ.

ಕೃಷಿ ನಿರ್ದೇಶಕರು